# ಗದ್ಯ ವಿಭಾಗ

# 1. ಸದ್ಗುಣ

ಕಾಡಿನ ಕೊಳದ ಬಳಿ ಒಂದು ಮೊಲ ವಾಸವಾಗಿತ್ತು. ಆ ಕೊಳದ ನೀರು ತಿಳಿಯಾಗಿ ಪರಿಶುದ್ಧವಾಗಿತ್ತು. ಇಂದ್ರನೀಲ ಮಣಿಯಂತೆ ಥಳಥಳಿಸುತ್ತಿತ್ತು. ಕೊಳದಸುತ್ತಲು ಕಾಡಿನಲ್ಲಿ ಹುಲ್ಲು ಪಚ್ಚೆಯಂತೆ ಹಸುರಾಗಿ ಕೋಮಲವಾಗಿ ಬೆಳೆದಿತ್ತು. ಅಲ್ಲಿನ ಗಿಡಗಳಲ್ಲಿ ಹೂಗಳೂ ಹಣ್ಣುಗಳೂ ಗೊಂಚಲು ಗೊಂಚಲಾಗಿ ತುಂಬಿಕೊಂಡಿದ್ದವು. ಆ ಅಡವಿಯು ಗಿಡ, ಮರ, ಬಳ್ಳಿ, ವನಸ್ಪತಿಗಳಿಂದ ತುಂಬಿ ನೋಟಕ್ಕೆ ಅತಿ ಸುಂದರವಾಗಿತ್ತು. ಅಲ್ಲಿ ಗಾಳಿಯೂ ಹಿತಕರವಾಗಿ ಸುಳಿಯುತ್ತಿತ್ತು. ಆ ಕಾಡಿನ ಸೊಗಸಿಗೆ ಮನ ಸೋತು ಜನರು ಅಲ್ಲಿಗೆ ಬರುತ್ತಾ ಇದ್ದರು.

ಮೊಲ ಬಹಳ ಬಲಶಾಲಿಯಾಗಿದ್ದರೂ, ಸೌಮ್ಯವಾಗಿಯೂ ಸುಂದರವಾಗಿಯೂ ಬುದ್ಧಿಶಾಲಿಯಾಗಿಯೂ ಇತ್ತು. ಅದರ ತೇಜಸ್ಸನ್ನೂ ಗಾಂಭೀರ್ಯವನ್ನೂ ಬುದ್ಧಿ ಶಕ್ತಿಯನ್ನೂ ಮೆಚ್ಚಿ, ಕಾಡಿನ ಎಲ್ಲ ಪ್ರಾಣಿಗಳೂ ಸೇರಿ ಅದನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡವು.

ಆ ವನದ ಪ್ರಾಣಿಗಳಲ್ಲಿ ಒಂದು ಮಂಗ, ಒಂದು ನರಿ, ಒಂದು ನೀರು ನಾಯಿ, ಈ ಮೂವರು ಮೊಲದ ಜೀವದ ಗೆಳೆಯರಾಗಿದ್ದರು. ಈ ಗೆಳೆಯರು ಪ್ರತಿದಿನ ಸಂಜೆಯ ಸಮಯದಲ್ಲಿ ಒಂದುಕಡೆ ತಪ್ಪದೆ ಸೇರುತ್ತಿದ್ದರು. ನಿತ್ಯವೂ ಮಾತನಾಡುತ್ತ ಚರ್ಚೆ ಮಾಡುತ್ತಾ ಕ್ರಮೇಣ ತಮ್ಮಲ್ಲಿದ್ದ ದುರ್ಗುಣಗಳನ್ನು ಬಿಟ್ಟು ಸದ್ಗುಣವಂತರಾದರು. ಆ ವನದ ಎಲ್ಲ ಪ್ರಾಣಿಗಳೊಡನೆ ಸ್ನೇಹವನ್ನು ಸಂಪಾದಿಸಿ ಸೌಮ್ಯದಿಂದ ನಡೆದುಕೊಳ್ಳುತ್ತಿದ್ದರು.



ಒಂದು ದಿನ ಸಾಯಂಕಾಲ ಈ ಮೂವರು ಆಪ್ತ ಮಿತ್ರರು ಮಾತಿಗೆ ಕುಳಿತಾಗ ಬಹಳ ಹೊತ್ತಾಯಿತು. ನಿರ್ಮಲವಾದ ಬಾನಿನಲ್ಲಿ ಪೂರ್ಣ ಚಂದ್ರ ಹೊಳೆಯುತ್ತಿದ್ದನು. ಮಧ್ಯರಾತ್ರಿಯ ಸಮಯವಾಗಿರಬಹುದು. ಆಗ ವನರಾಜನಾದ ಮೊಲ ಇವರನ್ನು ಕಂಡು 'ಗೆಳೆಯರೆ, ನಾಳೆ ಏನನ್ನೂ ತಿನ್ನಬಾರದು. ಉಪವಾಸಮಾಡಬೇಕು. ಅಲ್ಲದೆ ನಮಗೆ ಸಿಕ್ಕ ಆಹಾರವನ್ನು ಹಸಿದವರಿಗೆ ದಾನಮಾಡಬೇಕು' ಎಂದು ಹೇಳಿತು. ಮೊಲದ ಈ ಮಾತಿಗೆ ಮೆಚ್ಚಿ, ಈ ಮೂವರು ಗೆಳೆಯರು ಸುಮ್ಮನಾದರು.

ಮರುದಿನ ಮಂಗ ಸಮೀಪದ ಒಂದು ಮಾವಿನ ತೋಪಿಗೆ ಹೋಗಿ ಒಳ್ಳೊಳ್ಳೆಯ ಹಣ್ಣುಗಳನ್ನು ಆರಿಸಿ ತಂದಿತು. ಆ ಹಣ್ಣುಗಳನ್ನು ಒಂದೆಡೆ ಇಟ್ಟುಕೊಂಡು ಯಾರಾದರೂ ಹಸಿದವರು ಬಂದರೆ ಕೊಡಬೇಕೆಂದು ಕಾಯುತ್ತಕುಳಿತಿತು. ಯಾರೂ ಬರದಿದ್ದರೆ ತನಗೆ ನಾಳೆ ಒಳ್ಳೆಯ ಆಹಾರವಾಗುತ್ತದೆ ಎಂದು ಯೋಚಿಸಿತು.

ಅದರಂತೆ ನರಿಯೂ ಆಹಾರವನ್ನು ಹುಡುಕುತ್ತ ಹೊರಟಿತು. ಒಂದು ಗುಡಿಸಲಿನ ಹೊರಗೆ ಮೊಸರಿನ ಒಂದು ಚಿಕ್ಕ ಪಾತ್ರೆಯನ್ನು ಕಂಡಿತು. ಅದರ ಒಡೆಯರು ಯಾರಾದರೂ ಇರಬಹುದೆ ಎಂದು ಸ್ವಲ್ಪ ಹೊತ್ತು ಅಲ್ಲಿಯೇ ಕಾದುಕುಳಿತಿತು. ಯಾರೂ ಬರಲಿಲ್ಲ. 'ಇದು ಯಾರ ವಸ್ತು', ಎಂದು ಗಟ್ಟಿಯಾಗಿ ಮೂರು ನಾಲ್ಕು ಸಲ ಕೂಗಿತು. ಯಾರೂ ಬರಲಿಲ್ಲ. ಆಗ ಮೊಸರಿನ ಪಾತ್ರೆಯನ್ನು ಬಾಯಲ್ಲಿ ಕಚ್ಚಿಕೊಂಡು ಹೋಯಿತು. ಅದನ್ನು ಒಂದು ಕಡೆ ಇಟ್ಟು, ಯಾರಾದರೂ ಹಸಿದುಬಂದ ವರಿಗೆ ಕೊಡಬೇಕೆಂದು ಕಾದು ಕುಳಿತಿತು. ಯಾರೂ ಬರದಿದ್ದರೆ ನಾಳೆ ತನಗೆ ಒಳ್ಳೆಯ ಊಟವಾಗುತ್ತದೆ ಎಂದು ಯೋಚಿಸಿತು.

ಇದೇ ರೀತಿ ನೀರುನಾಯಿ ಆಹಾರವನ್ನು ಹುಡುಕುತ್ತಾ ಹೋಯಿತು. ಒಬ್ಬ ಮೀನುಗಾರ ಮೀನುಗಳನ್ನು ಹಿಡಿದು ರಾಶಿ ಹಾಕುತ್ತಿದ್ದನು. ಅಲ್ಲಿಯೇ ಸ್ವಲ್ಪ ದೂರದಲ್ಲಿ ಮರಳಿನವೇಲೆ ಒಂದು ಮೀನು ಬಿದ್ದಿತ್ತು. ಇದರ ಒಡೆಯರು ಯಾರಾದರೂ ಇರಬಹುದೇನೋ ಎಂದು ಕಾದು ನೋಡಿತು. ಯಾರೂ ಬರಲಿಲ್ಲ 'ಈ ಮೀನು ಯಾರದು', ಎಂದು ಮೂರು ನಾಲ್ಕು ಸಲ ಗಟ್ಟಿಯಾಗಿ ಕೂಗಿತು. ಯಾರೂ ಬರಲಿಲ್ಲ. ಆಗ ಆ ಮೀನನ್ನು ಕಚ್ಚಿ ಕೊಂಡು ಬಂದು ಒಂದುಕಡೆ ಇಟ್ಟಿತು. ಯಾರಾದರೂ ಹಸಿದು ಬಂದು ಕೇಳಿದರೆ ಕೊಡಬೇಕೆಂದು ಕಾದು ಕುಳಿತಿತು. ಯಾರೂ ಬಾರದಿದ್ದರೆ ನಾಳೆ ತನಗೆ ಒಳ್ಳೆಯ ತಿಂಡಿಯಾಗುತ್ತದೆ ಎಂದು ಯೋಚಿಸಿತು.

ಮೊಲದ ಆಹಾರ ಹುಲ್ಲು. ಅದು ಬೇಕಾದಷ್ಟು ಬೆಳೆದಿತ್ತು. ಮನುಷ್ಯರು ಹುಲ್ಲನ್ನು ತಿನ್ನುವುದಿಲ್ಲ. 'ಇದನ್ನು ಯಾರಿಗೆ ಕೊಡಲಿ, ಏನು ಮಾಡಲಿ' ಎಂದು ಮೊಲ ಬಹಳ ಚಿಂತೆಗೆ ಒಳಗಾಯಿತು. ಆಗ ಮನುಷ್ಯರು ಮಾಂಸವನ್ನು ತಿನ್ನುವರೆಂಬ ವಿಷಯ ಹೊಳೆಯಿತು. ಆನಂದದಿಂದ ಕುಣಿದಾಡಿತು. ''ಒಬ್ಬನ ಹಸಿವನ್ನು ಹಿಂಗಿಸಲು ತನ್ನ ಮಾಂಸವನ್ನೇ ಕೊಡುತ್ತೇನೆ. ಖಂಡಿತವಾಗಿಯೂ ಕೊಟ್ಟು ಧನ್ಯನಾಗುತ್ತೇನೆ,'' ಎಂದು ದೃಢ ನಿರ್ಧಾರದಿಂದ ಪ್ರತಿಜ್ಞೆಮಾಡಿತು. ಈ ಪ್ರತಿಜ್ಞೆಯನ್ನು ಕೇಳಿ ಭೂದೇವಿಗೆ ರೋಮಾಂಚನವಾಯಿತು. ಸಮುದ್ರ ಅಲ್ಲೋಲ ಕಲ್ಲೋಲವಾಯಿತು. ಆಕಾಶ ನಿರ್ಮಲ ನೀಲವರ್ಣದಿಂದ ಬೆಕ್ಕಸ ಬೆರಗಾಯಿತು. ಗಾಳಿಯು ಸುಳಿಸುಳಿದು ನರ್ತಿಸುತ್ತ ಪುಷ್ಪಪರಾಗವನ್ನು ತಂದು ಸುರಿದುಸನ್ಮಾನಿಸಿತು.

ಈ ಪ್ರತಿಜ್ಞೆಯನ್ನು ಪರೀಕ್ಷಿಸಬೇಕೆಂದು ದೇವೇಂದ್ರನು ಮನಸ್ಸು ಮಾಡಿದನು. ಬಡ ಹಾದಿಕಾರನ ವೇಷದಿಂದ ಮಧ್ಯಾಹ್ನ ಆವನಕ್ಕೆ ಬಂದನು. ''ನನ್ನ ಗುಂಪಿನ ಗೆಳೆಯರನ್ನು ಅಗಲಿ ದಾರಿತಪ್ಪಿ ಬಂದಿದ್ದೇನೆ. ನನಗೆ ಬಹಳ ಹಸಿವಾಗಿದೆ'' ಎಂಥು ಕೂಗುತ್ತಾ ಮಂಗನ ಬಳಿಗೆ ಬಂದನು. ಮಂಗ ತನ್ನಲ್ಲಿದ್ದ ಹಣ್ಣುಗಳನ್ನು ಕೊಡಲು ಹೋಯಿತು. ಆಗ ವೇಷಧಾರಿ ಯಾದ ಶಕ್ರನು ''ಸ್ವಲ್ಪ ತಾಳು ಬರುತ್ತೇನೆ'' ಎಂದು ಮುಂದೆ ಹೋದನು. ನರಿಯ ಬಳಿಗೆ ಹೋಗಿ ''ಹಸಿವು ಹೆಚ್ಚಾಗಿದೆ, ಅನ್ನವನ್ನು ಕೊಡಿರಪ್ಪಾ'' ಎಂದು ಕೂಗಿದನು. ನರಿ ತನ್ನಲ್ಲಿದ್ದ ಆಹಾರವನ್ನು ಕೊಡಲು ಹೋಯಿತು. ಹುಸಿವೇಷದ ಇಂಧ್ರನು ''ಬರುತ್ತೇನೆ, ಸ್ವಲ್ಪ ತಾಳು'' ಎಂದು ಹೇಳಿ ನೀರು ನಾಯಿಯ ಹತ್ತಿರ ಬಂದನು'. 'ಹಸಿವನ್ನು ತಾಳಲಾರೆ ಏನಾದರೂ ದಾನ ಮಾಡಿರಯ್ಯಾ'', ಎಂದು ಕೂಗಿದನು. ನೀರುನಾಯಿ ತನ್ನಲ್ಲಿದ್ದ ಮೀನನ್ನು ಕೊಡಲು ಹೋಯಿತು. ಇಂದ್ರನು ಬರುತ್ತೇನೆ ಸ್ವಲ್ಪತಾಳು ಎಂದು ಹೇಳುತ್ತಾ ಮೊಲದ ಸಮೀಪಕ್ಕೆ ಹೋದನು. ''ಅಯ್ಯೋ! ನನಗೆ ತಾಳಲಾರದ ಹಸಿವು. ಇಲ್ಲಿ ನನ್ನ ಹಸಿವನ್ನು ಹಿಂಗಿಸುವವರು ಯಾರೂ ಇಲ್ಲವೆ?'' ಎಂದು ಕೂಗಿದನು. ಮೊಲ ಬಂದು ''ನನ್ನ ಮಾಂಸವನ್ನು ತಿಂದು ತೃಪ್ತಿಪಡು''

ಎಂದಿತು. ಅದಕ್ಕೆ ಇಂದ್ರನು ''ಅಯ್ಯಾ ಪ್ರಾಣವನ್ನೇ ಕೊಡಲು ಹಿಂಜರಿಯದೆ ದಯೆ ತೋರಿದ ನಿನ್ನನ್ನು ಹೇಗೆ ಕೊಲ್ಲಲಿ? ಖಂಡಿತ ಸಾಧ್ಯವಿಲ್ಲ' ಎಂದನು. ಮೊಲಕ್ಕೆ ಬಹಳ ವ್ಯಥೆಯಾಯಿತು. ಒಬ್ಬರ ಹಸಿವನ್ನು ಹಿಂಗಿಸುವುದು ತನ್ನಿಂದಾಗಲಿಲ್ಲವಲ್ಲಾ ಎಂಬ ದುಃಖದಿಂದ ಸಂಕಟಪಡುತ್ತಿತ್ತು.

ಸ್ವಲ್ಪ ದೂರದಲ್ಲಿ ಇಂದ್ರನ ಮಾಯೆಯಿಂದ ಬೆಂಕಿ ಹತ್ತಿ ಕೊಂಡಿತು. ಬಂಗಾರದ ಬಣ್ಣದಂತೆ ಉರಿಗಳು ಮೇಲೇಳುತ್ತಿದ್ದವು. ಅದನ್ನು ಕಂಡು ಮೊಲ ಹರ್ಷದಿಂದ ಬೆಂಕಿಯ ಬಳಿಗೆ ಓಡೋಡಿ ಹೋಯಿತು. ತನ್ನ ಮೈಮೇಲೆ ಸಣ್ಣ ಕ್ರಿಮಿಕೀಟಗಳಿದ್ದರೆ ಬೆಂಕಿಯಿಂದ ಅವು ಸಾಯಬಾರದೆಂದು ಮೈಯನ್ನು ಎರಡು ಮೂರು ಸಲ ಚೆನ್ನಾಗಿ ಕೊಡವಿತು. ರಭಸದಿಂದ ನುಗ್ಗಿ ಬೆಂಕಿಯಲ್ಲಿ ಬಿದ್ದಿತು. ಅದರ ಮೈ ಸುಟ್ಟಿತೆ? ಇಲ್ಲ, ಅಗ್ನಿದೇವನು ಹೂವಿನ ರಾಶಿಯಂತೆ ತಂಪಾಗಿ ಅದರ ಆಯಾಸವನ್ನು ನಿವಾರಿಸಿದನು.



ಇಂದ್ರನು ತನ್ನ ಕೈಗಳಿಂದ ಹೂವನ್ನೆತ್ತುವಂತೆ ಮೃದುವಾಗಿ ಮೊಲವನ್ನೆತ್ತಿಕೊಂಡು ಸ್ವರ್ಗಕ್ಕೆ ಹೋದನು. ದೇವ ಸಭೆಯಲ್ಲಿ ಅದರ ತ್ಯಾಗವನ್ನು ಬಾಯ್ತುಂಬ ಹೊಗಳಿದನು. ಅದರ ವಿಗ್ರಹಗಳನ್ನು ರತ್ನದಲ್ಲಿ ಕೆತ್ತಿಸಿ, ತನ್ನರಮನೆಯ ಮೇಲೆ ಒಂದನ್ನು ಸ್ಥಾಪಿಸಿ, ಅದಕ್ಕೆ 'ವೈಗ್ರವಂತ', ಎಂಬ ಹೆಸರಿಟ್ಟನು. ದೇವ ಸಭಾಭವನದಲ್ಲಿ ಇನ್ನೊಂದನ್ನು ಸ್ಥಾಪಿಸಿ, ಸುಧರ್ಮ ಎಂದು ಹೆಸರಿಟ್ಟನು. ಅಮೃತಕಿರಣನಾದ ಚಂದ್ರನಲ್ಲಿ ಮತ್ತೊಂದು ಮೂರ್ತಿಯನ್ನು ಸ್ಥಾಪಿಸಿದನು. ಹೀಗೆ ಅದರ ಕೀರ್ತಿಯನ್ನು ಶಾಶ್ವತವಾಗಿರುವಂತೆ ಮಾಡಿದನು.

## ಶಬ್ದಗಳ ಅರ್ಥ

ಕೋಮಲ-ಮೃದು; ದುರ್ಗಣ-ಕೆಟ್ಟಗುಣ; ನಿರ್ಮಲ-ಪವಿತ್ರ; ಹಿಂಗಿಸು-ತೃಪ್ತಿಪಡಿಸು

## ಅಭ್ಯಾಸ

**ಕೃತಿ 1) I. ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

ಗೊಂಚಲು → ______ / ______ / ______ / ಹೂವುಗೊಂಚಲು

**II. ವರ್ತುಳದಲ್ಲಿ ಕೊಟ್ಟ ಪ್ರಾಣಿಗಳ ಹೆಸರನ್ನು ವರ್ಗೀಕರಿಸಿ ಬರೆಯಿರಿ.**

ಹುಲಿ, ಬೆಕ್ಕ, ಆನೆ,
ಕುದುರೆ, ಸಿಂಹ, ಕರಡಿ, ಎಮ್ಮೆ,
ಹೋರಿ, ನರಿ, ಚಿರತೆ, ಎತ್ತು,
ತೋಳ, ಆಕಳು, ಕಾಡೆಮ್ಮೆ, ನಾಯಿ
ಹಂದಿ, ಜಿರಾಫೆ, ಕೋಣ, ಚಿಗರೆ,
ಘೇಂಡಾ ಮೃಗ, ಕುರಿ, ಆಡು,
ಪಟ್ಟೆ ಚಿರತೆ, ಕಾಡುಕೋಣ,
ಝಿಬ್ರಾ, ಕತ್ತೆ

| ಸಾಕುಪ್ರಾಣಿಗಳು | ಕಾಡು ಪ್ರಾಣಿಗಳು |
|---|---|
| | |
| | |
| ಕತ್ತೆ | |
| | ಕಾಡು ಕೋಣ |

**ಕೃತಿ 2) ಕೆಳಗೆ ಸೂಚಿಸಿದಂತೆ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

ಹುಲ್ಲು ತಿನ್ನುವ ಪ್ರಾಣಿಗಳು → ಆಕಳು / ______ / ______ / ______

| ಮಾಂಸ ತಿನ್ನುವ ಪ್ರಾಣಿಗಳು | |
|---|---|
| | |
| | |
| | |
| | ಹುಲಿ |

**ಕೃತಿ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1) ಮೊಲ ವಾಸವಾಗಿದ್ದ ಕಾಡು ಹೇಗಿತ್ತು?
2) ಮೊಲವು ಗೆಳೆಯರಿಗೆ ಹಬ್ಬವನ್ನು ಹೇಗೆ ಆಚರಿಸಬೇಕೆಂದು ಹೇಳಿತು?
3) ಕಾಡಿನ ದಾರಿಗುಂಟ ಯಾರು ಹೊರಟಿದ್ದರು ?
4) ನೀರು ನಾಯಿಯು ತಪಸ್ವಿಗೆ ಏನೆಂದು ಹೇಳಿತು?

**ಕೃತಿ 4) ಹೊಂದಿಸಿ ಬರೆಯಿರಿ.**

| | | | |
|---|---|---|---|
| 1) | ಮೊಲ | ........................................ | ಮೊಸರಿನ ಚಿಕ್ಕ ಪಾತ್ರೆ ತಂದಿತು |
| 2) | ನರಿ | ........................................ | ಒಳ್ಳೊಳ್ಳೆಯ ಹಣ್ಣುಗಳನ್ನು ಆರಿಸಿತಂದಿತು |
| 3) | ಮಂಗ | ........................................ | ಒಂದು ಮೀನವನ್ನು ತಂದಿತು |
| 4) | ನೀರುನಾಯಿ | ........................................ | ತನ್ನ ಮಾಂಸವನ್ನೇ ಕೊಡತ್ತೇನೆಂದಿತು |

***

93SVG4